3	ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲ್ಲೂಕಿನ ಉಡಬಾಳ್‌ದಿಂದ ಹಳ್ಳಿಖೇಡ್ (ಬಿ) ರಸ್ತೆ ಸುಧಾರಣೆ ಕಿಮೀ 5 00 ದಿಂದ 23 00ರವರೆಗೆ	100 00
	ಒಟ್ಟು	**300 0**
	5054 ಆರ್ಥಿಕ ಪ್ರಾಮುಖ್ಯತೆ ಯೋಜನೆ	
1	ಬೀದರ್ ಜಿಲ್ಲೆಯಲ್ಲಿ ಜಹೀರಾಬಾದ್–ನಾಂದೇಡ್ ರಸ್ತೆ ಕಿಮೀ 0 00 ರಿಂದ 15 00ರ ಭಾಗದ ಅಭಿವೃದ್ಧಿ ಕಾಮಗಾರಿ	1427 00
	ಒಟ್ಟು	**1427 00**

747 ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬನವಕಲ್ಯಾಣ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಗೆ ವಿವಿಧ ಇಲಾಖೆಗಳಿಗೆ ಮಂಜೂರಾಗಿರುವ ಎ, ಬಿ, ಸಿ ಹಾಗೂ ಡಿ ದರ್ಜೆಯ ಹುದ್ದೆಗಳ ಸಂಖ್ಯೆ ಎಷ್ಟು, (ಹುದ್ದೆವಾರು ವಿವರಗಳನ್ನು ತಾಲ್ಲೂಕುವಾರು ಅಂಕಿ–ಅಂಶಗಳಲ್ಲಿ ಒದಗಿಸುವುದು)

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ) ರಾಜ್ಯ ಮತ್ತು ಜಿಲ್ಲಾ ವಲಯಗಳಲ್ಲಿ ಮಂಜೂರಾದ ಹುದ್ದೆಗಳ (ಅಧಿಕಾರಿಗಳು ಮತ್ತು ನೌಕರರು) ಸಂಖ್ಯೆ ಎಷ್ಟು ಅದಕ್ಕೆ ಸಂಬಂದಿಸಿದ ಇತರೆ ಅಂಕಿ–ಅಂಶಗಳ ಬಗೆಗಿನ ಮಾಹಿತಿಯನ್ನು ಆಯವ್ಯಯ ತಯಾರಿಕೆ ಸಮಯದಲ್ಲಿ ಸಂಗ್ರಹಿಸಲಾಗುತ್ತದೆ

ರಾಜ್ಯ ವಲಯ ಹುದ್ದೆಗಳು ಇಡೀ ರಾಜ್ಯದಲ್ಲಿ ಹರಡಿಕೊಂಡಿದ್ದು, ಜಿಲ್ಲಾವಾರು ಮಾಹಿತಿಯನ್ನು ಈಗಿರುವ ವದ್ಧತಿಯಲ್ಲಿ ಸಂಗ್ರಹಿಸಲಾಗುವುದಿಲ್ಲ ಜಿಲ್ಲಾ ವಲಯದ ಪ್ರತಿಯೊಂದು ಇಲಾಖೆಯಲ್ಲಿರುವ ಮಂಜೂರಾದ ಹುದ್ದೆಗಳನ್ನು ಜಿಲ್ಲಾವಾರು ಸಂಗ್ರಹಿಸಲಾಗುತ್ತದೆ ಬೀದರ್ ಜಿಲ್ಲೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ಈ ಕೆಳಗೆ ನೀಡಲಾಗಿದೆ (2006–07ರ ಅನುಬಂಧ–'ಬಿ'ಯ ಪ್ರಕಾರ)

ಇಲಾಖೆಗಳು	ಅಧಿಕಾರಿಗಳು		ನೌಕರರು	
	ಯೋಜನೆ	ಯೋಜನೇತರ	ಯೋಜನೆ	ಯೋಜನೇತರ
ಶಿಕ್ಷಣ	0	133	0	7050

ವೈದ್ಯಕೀಯ ಶಿಕ್ಷಣ	33	114	243	810
ಆರೋಗ್ಯ ಮತ್ತು ಕುಟುಂಬ ಕಲ್ಯಾಣ	16	0	245	0
ಸಮಾಜ ಕಲ್ಯಾಣ	2	4	62	480
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	9	2	123	27
ಕೃಷಿ ಮತ್ತು ಭೂ ಸಂರಕ್ಷಣೆ	3	69	43	271
ಪಶು ಸಂಗೋಪನೆ	0	9	71	341
ಅರಣ್ಯ	2	0	43	0
ಗ್ರಾಮೀಣಾಭಿವೃದ್ಧಿ	7	9	35	319
ಕೈಗಾರಿಕೆ	0	6	3	82
ಲೋಕೋಪಯೋಗಿ	0	22	0	397
ಯುವಜನ ಸೇವೆಗಳು	0	1	0	3
ಮೀನುಗಾರಿಕೆ	0	1	0	17
ಸಣ್ಣ ನೀರಾವರಿ	0	1	0	10
ಯೋಜನೆ	0	3	0	11
ಒಟ್ಟು	**72**	**374**	**868**	**9818**

907(1219) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕಳೆದ 3 ವರ್ಷಗಳಿಂದ ಇಲ್ಲಿಯವರೆವಿಗೆ ಬಡಾವಣೆಗಳನ್ನು ನಿರ್ಮಿಸಲು ಹಾಗೂ ಇತರೆ ಅಭಿವೃದ್ಧಿಗಾಗಿ ಭೂಸ್ವಾಧೀನಪಡಿಸಿಕೊಂಡಿರುವ ಜಮೀನಿನ ವಿಸ್ತೀರ್ಣ ಎಷ್ಟು (ಪೂರ್ಣ ವಿವರ ಗಳನ್ನು ಒದಗಿಸುವುದು),

ಆ) ಈ ಪೈಕಿ ಎಷ್ಟು ಭೂಸ್ವಾಧೀನ ಪ್ರಕರಣಗಳನ್ನು ನಿಯಮ 4/1 ಮತ್ತು 6/1ರಲ್ಲಿ ಇಲ್ಲಿಯವರೆವಿಗೆ ಯಾವ ಕಾರಣಗಳಿಗಾಗಿ ಡಿಲೀಟ್ ಮಾಡಲಾಗಿದೆ ಅಥವಾ ಕೈಬಿಡಲಾಗಿದೆ,